## DISCUSSION ON QUESTION No. 315.

*Silk Industry in the State.*

Mr. SPEAKER.—The next subject is to raise a discussion in respect of Question No. 315 regarding the Silk Industry in the State by Sri U. M. Madappa.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಇದೇ ಜೂಲೈ ತಿಂಗಳು 21ರಲ್ಲಿ ಚರ್ಚೆಯಾದ ಮೈಸೂರು ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟ ನನ್ನ ನಂ. 315ನೆಯ ಪ್ರಶ್ನೆಗೆ ಸರ್ಕಾರದವರಿಂದ ತೃಪ್ತಿಕರವಾದ ಮತ್ತು ಒಂದು ಸಮರ್ಪಕವಾದ ಉತ್ತರ ದೊರೆಯದೆ ಇದ್ದುದಕ್ಕಾಗಿ ನಾನು ಈಗ ಈ ಚರ್ಚೆಯನ್ನು ಪ್ರಾರಂಭಮಾಡಬೇಕಾಯಿತು.

ಈ ರೇಷ್ಮೆ ಕೈಗಾರಿಕೆ ಎಷ್ಟು ಪ್ರಾಮುಖ್ಯವಾದದ್ದು! ಇದರಿಂದ ನಮ್ಮ ಸಂಸ್ಥಾನಕ್ಕೆ ಎಷ್ಟು ಉತ್ಪತ್ತಿಯಾಗುತ್ತಿದೆ ಮತ್ತು ಇದು ಎಂಥ ಉತ್ತಮವಾದ ಒಂದು ಕೈಗಾರಿಕೆಯಾಗಿದೆಯೆಂಬ ವಿಚಾರವನ್ನು ಈಗ ನಾನು ಒತ್ತಿಹೇಳಬೇಕಾದ್ದು ಅನವಶ್ಯಕ. ಇದು ಸರ್ಕಾರದವರಿಗೂ ಕೂಡ ಗೊತ್ತಿರುವ ವಿಷಯ; ಮತ್ತು ಎಲ್ಲ ಸಾರ್ವಜನಿಕರಿಗೂ ತಿಳಿದಿರುವಂಥ ವಿಷಯ. ಎರಡನೆಯ ಮಹಾಯುದ್ಧ ಕಾಲದಲ್ಲಿ ಆರು ಸಿಲ್ಕು ಫಿಲೇಚರ್ ಕಾರ್ಖಾನೆಗಳ ಈ ಕೈಗಾರಿಕೆಯು ಅಂಗವಾಗಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟವು. ಆ ಕೈಗಾರಿಕೆಗಳು ಟಿ. ನರಸೀಪುರ, ಮಾರಹಳ್ಳಿ, ಕುಪೇರು, ಚಾಮರಾಜನಗರ, ಮೈಸೂರು ಮತ್ತು ಕಾರ್ಕಳಹಳ್ಳಿ ಈ ಆರು ಸ್ಥಳಗಳಲ್ಲಿ ನಡೆಸಲ್ಪಡುತ್ತಿದ್ದವು. ಆದರೆ ಈಗ ಸುಮಾರು 8—10 ವರ್ಷಗಳಿಂದಲೂ ಈ ಕಾರ್ಖಾನೆಗಳೇ ಮುಚ್ಚಲ್ಪಟ್ಟಿವೆ. ಅವು ಮುಚ್ಚಲ್ಪಟ್ಟಿರುವುದರಿಂದ ಏನೊಂದು ಪರಿಣಾಮ ಅಥವಾ ಪರಿಕಾಂಶ ಉಂಟಾಗಿದೆಯೆಂದರೆ ಆ ಪ್ರದೇಶದಲ್ಲಿದ್ದ ಕೂಲಿಗಾರರಿಗೆ ಕೂಲಿ ದೊರೆಯದಂತಾಗಿ, ಅಲ್ಲಿ ಈಗ ನಿರುದ್ಯೋಗ ಸಮಸ್ಯೆ ಎಲ್ಲೆಲ್ಲಿಯೂ ತಾಂಡವವಾಡುತ್ತಿದೆ. ಅಷ್ಟೇ ಅಲ್ಲದೆ ಈ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದರಿಂದ ಸರ್ಕಾರಕ್ಕೂ ಕೂಡ ವಿಶೇಷ ನಷ್ಟವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಇನ್ನು ಮೂರನೆಯದಾಗಿ: ಆ ರೇಷ್ಮೆ ವ್ಯವಸಾಯಗಾರರಿಗೂ ಕೂಡ ತುಂಬ ಧಕ್ಕೆಯುಂಟಾಗಿದೆ. ಏತಕ್ಕೆ ಮತ್ತು ಹೇಗೆಂದು ತಾವು ಕೇಳುವುದಾದರೆ—ಈಗ ಆ ನಮ್ಮ ಪ್ರದೇಶದಲ್ಲಿ ಉತ್ಪನ್ನಮಾಡತಕ್ಕಂಥ ಹೆಚ್ಚು ಭಾಗ ರೇಷ್ಮೆ ಗೂಡುಗಳೆಲ್ಲಾ ಮದ್ರಾಸ್ ಪ್ರಾವಿನ್ಸಿನಲ್ಲಿರತಕ್ಕ ಕೊಳ್ಳೇಗಾಲದ ಕಾರ್ಖಾನೆಗೆ ಹೋಗುತ್ತಿದೆ. ಮದ್ರಾಸು ಸರ್ಕಾರ ಇದರಿಂದ ಉತ್ಪತ್ತಿ ಪಡೆಯುತ್ತಿದೆ. ಹೀಗೆ ಮಾಡುವುದರಿಂದ ರೈತರಿಗಾಗುವ ನಷ್ಟವೇನೆಂದು ಕೇಳಬಹುದು. ಕೊಳ್ಳೇಗಾಲದ ಕಾರ್ಖಾನೆಯವರು ಕೊಂಡು ಗುಳಿದ ರೇಷ್ಮೆ ಗೂಡನ್ನು ಚರಕದಿಂದ ಬಿಚ್ಚಿ ನೂಲು ಮಾಡಬೇಕು. ಚರಕಾದಲ್ಲಿ ನೂಲುವುದರಿಂದ ಬೇಸಿಕ್ ವೇಜಸ್ ಜಾಸ್ತಿಯಾಗುತ್ತದೆ. ಅಲ್ಲದೆ ರೇಷ್ಮೆ ವೇಸ್ಟೇಜ್ ಸಹ ಹೆಚ್ಚುತ್ತದೆ. ಇದರಿಂದ ಒಂದು ವಿಧದಲ್ಲಿ ಸರ್ಕಾರಕ್ಕೂ ನಷ್ಟ, ರೈತನಿಗೂ ನಷ್ಟ ಮತ್ತು ದೇಶಕ್ಕೂ ನಷ್ಟವಾಗಿದೆಯೆಂದು ಹೇಳಬಹುದು. ಇನ್ನೂ ಒಂದು ದೃಷ್ಟಿಯಲ್ಲಿ ರೈತನಿಗೆ ಸರಿಯಾದ ಬೆಲೆ ಕೂಡ ದೊರೆಯದೆ ಹೋಗಬಹುದು. ಹೇಗೆಂದರೆ, ಮದ್ರಾಸಿನಿಂದ ಬರತಕ್ಕ ರೇಷ್ಮೆ ವ್ಯಾಪಾರಗಾರರು ಮೈಸೂರು ಸಂಸ್ಥಾನದ ರೆಗ್ಯುಲೇಟೆಡ್ ಮಾರ್ಕೆಟ್ಟುಗಳಲ್ಲಿ ರೇಷ್ಮೆ ಧಾರಣೆಗಳು ಏರದಂತೆಮಾಡಿ ಅವರಿಗೆ ಅನುಕೂಲವಾಗುವಂತೆ ಮನಾಪಲಿ ಪ್ರೈಜಿಗೆ ಅವರು ವಾಲನ್ನು ಕೊಳ್ಳುತ್ತಿದ್ದಾರೆ.

ಇದರಿಂದ ಸರ್ಕಾರದವರಿಗೆ ಹೇಗೆ ನಷ್ಟವಾಗುತ್ತಿದೆ ಎಂದು ಕೇಳಬಹುದು. ಟಿ. ನರಸೀಪುರ ಮತ್ತು ಮೈಸೂರು ಫಿಲೇಚರ್ ಕಾರ್ಖಾನೆಗಳಲ್ಲಿ ನಮ್ಮ ಸರ್ಕಾರ ಷೇರುಗಳನ್ನು ಪಡೆದಿದೆ. ನನ್ನ 21ನೆಯ ತಾರೀಖಿನ ಪ್ರಶ್ನೆಗೆ ಉತ್ತರವಾಗಿ ಈ ರೇಷ್ಮೆ ಕಂಪೆನಿಗಳಲ್ಲಿ ಸರ್ಕಾರದವರ ಷೇರು ಮೊಬಲಗು ಕೇವಲ 15,000 ರೂಪಾಯಿ ಇರತ್ತದೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ನಮ್ಮ ಬಜೆಟ್ ಪುಸ್ತಕವನ್ನು ತೆಗೆದು ನೋಡಿದರೆ ಆ ಕಂಪೆನಿಗಳಲ್ಲಿ ನಮ್ಮ ಮೈಸೂರು ಸರ್ಕಾರ ಪಡೆದಿರತಕ್ಕ ಷೇರುಗಳ ಮೊಬಲಗು 45 000 ರೂಪಾಯಿಗಳೆಂದು ತಿಳಿಸಲಾಗಿದೆ. ಆದರೆ ಎರಡರಲ್ಲಿ ಯಾವುದು ಸರಿ ಯಾವುದು ತಪ್ಪು ಎಂಬುದು ನನಗೆ ತಿಳಿಯಲಾಗದೆ ಹೋಗಿದೆ. ಇದನ್ನು ಇತ್ಯರ್ಥಮಾಡುವ ಅವಕಾಶವನ್ನು ಸರ್ಕಾರದವರಿಗೆ ಬಿಟ್ಟಿದ್ದೇನೆ. ಈಗಾಗಲೇ ಈ ರೇಷ್ಮೆ ಕಾರ್ಖಾನೆಗಳ ಷೇರಿನ ಬೆಲೆ ಇಳಿಮುಖವಾಗಿ ಒಂದು ಷೇರಿಗೆ 10 ರೂಪಾಯಿಗಳೆಂದಿದ್ದ ಬೆಲೆ ಈಗ 3 ರೂಪಾಯಿಗಳಿಗೆ ಇಳಿದಿದೆಯೆಂದು ನಾನು ಕೇಳುತ್ತಿದ್ದೇನೆ. ಕಾರ್ಖಾನೆಗಳು ಮುಚ್ಚಲ್ಪಟ್ಟಿರುವುದೇ ಇದಕ್ಕೆ ಕಾರಣ. ಇದರಿಂದ ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತಿದೆಯೆಂಬುದನ್ನು ಹೇಳಬೇಕಾದ್ದಿಲ್ಲ. ಅಷ್ಟೇ ಅಲ್ಲದೆ ನಮ್ಮ ಸರ್ಕಾರಕ್ಕೆ ಇಲ್ಲಿಯವರೆಗೆ ಯಾವ ರಿವಿಡೆಂಡನ್ನು ಹಂಚಿರುವುದಿಲ್ಲ. ಸರ್ಕಾರ ಈ ಕಂಪೆನಿಗೆ ಲಕ್ಷಾಂತರ ರೂಪಾಯಿ ಸಾಲ ಕೊಟ್ಟಿದೆ. ಕೊಟ್ಟಿದ್ದ ಸಾಲಕ್ಕೆ ಅತ್ತ ಬಡ್ಡಿಯೂ ಇಲ್ಲ, ಇತ್ತ ರಿವಿಡೆಂಡೂ ಇಲ್ಲ. ಹೀಗೆಲ್ಲಾ ಆದುದರಿಂದಲೇ ನಮ್ಮ ಸರ್ಕಾರದ ಹಣಕಾಸಿನ ಪರಿಸ್ಥಿತಿ ಮತ್ತಷ್ಟು ಕೆಡಲು ಕಾರಣವಾಗಿರತ್ತೆಂಬುದನ್ನು ನಾನು ಪುನಃ ಒತ್ತಿ ಹೇಳಬೇಕಾಗುತ್ತದೆ. ಸರ್ಕಾರ ಈ ಕಂಪೆನಿಗಳಿಂದ ಪಡೆದಿರತಕ್ಕ ಷೇರುಗಳ ಮೊಬಲಗನ್ನು ಉಳಿಸಿಕೊಳ್ಳಬೇಕು. ಮತ್ತು ಆ ಕಂಪೆನಿಗಳಿಗೆ ಕೊಟ್ಟಿರತಕ್ಕ ಸಾಲವನ್ನು ಬರಮಾಡಿಕೊಳ್ಳಬೇಕು. ಆ ಬಗ್ಗೆ ತಕ್ಕ ಎಲ್ಲ ಕಾರ್ಯಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು. ಹೀಗೆ ಹಣವನ್ನು ವಾಪಸ್ಸು ಪಡೆಯುತಕ್ಕ ಬಗ್ಗೆ ಪೂರ್ಣಲೋಚನೆ ಮಾಡುವಾಗ ರೇಷ್ಮೆ ವ್ಯವಸಾಯಗಾರರ ಮತ್ತು ಕೂಲಿಗಾರರ ಹಿತದೃಷ್ಟಿಯನ್ನು ತಾವು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು. ಆದರೆ ಈ ಬಗ್ಗೆ ನನ್ನ ಸಲಹೆಯೇನೆಂದರೆ ತಾವು ಈಗ ಮುಚ್ಚಲ್ಪಟ್ಟಿರತಕ್ಕ ಕಾರ್ಖಾನೆಗಳನ್ನೆಲ್ಲಾ ಮತ್ತೆ ಪ್ರಾರಂಭವಾಗುವಂತೆ ಮಾಡಿ, ಆ ಸ್ಥಳಗಳಲ್ಲರತಕ್ಕ ಕೂಲಿಗಾರರಿಗೆಲ್ಲಾ ಕೂಲಿ ದೊರೆಯುವಂತೆ ಮಾಡಬೇಕೆಂದೂ, ತನ್ಮೂಲಕ ಕಂಪೆನಿಯ ಆದಾಯ ಹೆಚ್ಚುವಂತೆ ಮಾಡಿ ಸರ್ಕಾರಕ್ಕೆ ಬರಬೇಕಾಗಿರುವ ಸಾಲವನ್ನು ತೀರಿಸಿಕೊಳ್ಳಲು ಸರ್ಕಾರ ಸರ್ವಪ್ರಯತ್ನಗಳನ್ನೂ ಕೈಕೊಳ್ಳಬೇಕೆಂದೂ ನಾನು ಒತ್ತಾಯ ಮಾಡುತ್ತೇನೆ. ಸಿಲ್ಕ್ ಮಾರ್ಕೆಟ್ ವಿಷಯ ಬಹಳ ಮುಖ್ಯವಾದುದು, ಹಿಂದಿನ ಅಧಿವೇಶನದಲ್ಲಿ ಈ ಸಂಬಂಧವಾಗಿ ಖೋತಾಸೂಚನೆ ಬಂದಾಗಲೂ ಈ ವಿಚಾರ ಹೇಳಿದ್ದೇನೆ. ರೈತರು ರೇಷ್ಮೆ ನೂಲನ್ನು ಕೋಲಿಗಳಿಗೆ ತೆಗೆದುಕೊಂಡು ಬರಬೇಕು. ಹಾಗೆ ತಂದಾಗ ಕೋಲಿಯವರು ಹೇಳಿದ ಬರೀದಿಗೆ ಕೊಡುವ

ಕಾಲ ಬಂದಿದೆ, ಇದರಿಂದ ರೈತರಿಗೆ ಬಹಳ ತೊಂದರೆ ಆಗುತ್ತಿದೆ. ನಮ್ಮ ರೇಷ್ಮೆ ವ್ಯವಸಾಯಗಾರರ ತೊಂದರೆ ತಪ್ಪಿಸಲು ಯಾವುದಾದರೂ ಒಂದು Silk Marketing Society ಮಾಡಬೇಕೆಂದು ಹೇಳಿದ್ದೆ. ರೇಷ್ಮೆ ಕಾರ್ಖಾನೆ ತೆರೆಯುವುದರಿಂದ, ಕಾರ್ಖಾನೆಯ ವರಿಗೇ ನೂಲು ಹೋಗುವುದರಿಂದ ಮಾರ್ಕೆಟ್ ಅವಶ್ಯಕತೆಯಿಲ್ಲದಿರಬಹುದು. ಏಕೆಂದರೆ ಅವರೇ ಕೊಂಡು ಡೈರೆಕ್ಟಾಗಿ ಮಾರುವುದಕ್ಕೆ ಅವಕಾಶವಿದೆ. ಈ ಎಲ್ಲಾ ದೃಷ್ಟಿಯಿಂದ ಕಾರ್ಖಾನೆಗಳನ್ನು ತೆರೆಯುತ್ತೀರಾ ಅಥವಾ ಯಾವ ರೀತಿ ಸುಧಾರಿಸುತ್ತೀರಿ ಎಂಬ ವಿಚಾರದಲ್ಲಿ ಉತ್ತರಬೇಕೆಂದು ಹೇಳಲಿಚ್ಛಿಸುತ್ತೇನೆ.

*ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ನನ್ನ ಮಾನ್ಯ ಸ್ನೇಹಿತರು ಸಂಸ್ಥಾನದಲ್ಲಿ ರೇಷ್ಮೆ ಉತ್ಪತ್ತಿಯಾಗತಕ್ಕಂಥ ಪ್ರದೇಶದಿಂದ ಅವರಲ್ಲೂ ಹೆಚ್ಚಾಗಿ ಉತ್ಪತ್ತಿಯಾಗುವ ಪ್ರದೇಶದಿಂದ ಬರುವುದರಿಂದ ನನಗಿಂತ ಹೆಚ್ಚಾದ ಮಾಹಿತಿ ಅವರಿಗಿದೆ. ಒಟ್ಟು ಸಂಸ್ಥಾನದಲ್ಲಿ ಈಗ ಉತ್ಪತ್ತಿಯಾಗುವ 280 ಲಕ್ಷ ಪೌಂಡಿನಲ್ಲಿ ಮೈಸೂರು ಡಿಸ್ಟ್ರಿಕ್ಟ್ ಒಂದರಲ್ಲೇ 200 ಲಕ್ಷ ಪೌಂಡು ರೇಷ್ಮೆ ಉತ್ಪತ್ತಿಯಾಗುತ್ತಿದೆ. ಇದೇ ರೀತಿಯಲ್ಲಿ ಸಂಸ್ಥಾನದ ಅನೇಕ ಕಡೆ ಬೆಂಗಳೂರು, ಕೋಲಾರ, ಮಂಡ್ಯದಲ್ಲಿ ಕೆಲವು ಭಾಗ, ತುಮಕೂರು ಡಿಸ್ಟ್ರಿಕ್ಟಿನ ಕೆಲವುಕಡೆ ಉತ್ಪತ್ತಿಯಾಗುತ್ತಿದೆ. ಸಂಸ್ಥಾನದಲ್ಲಿ ಸಹಸ್ರಾರು ಫ್ಯಾಮಿಲೀಸ್, ಸಂಸಾರಗಳು ಈ ಕಸಬನ್ನು ಉಪಕಸಬನ್ನಾಗಿ ಮಾಡಿಕೊಂಡು ಈಗ ಜೀವನ ಮಾಡುತ್ತಿದ್ದಾರೆ. ಇದು ಲಕ್ಷಾಂತರ ಜನರ ಜೀವನದ ಉಪಕಸಬಾಗಿರುವ ಕೈಗಾರಿಕೆ ಮತ್ತು ವ್ಯವಸಾಯ ಎಂಬುದನ್ನು ಸರ್ಕಾರದವರು ಚೆನ್ನಾಗಿ ಮನಗಂಡಿದ್ದಾರೆ. ಮಾನ್ಯ ಸದಸ್ಯರು ಈ ಸಮಯದಲ್ಲಿ ಕೆಲವು ಮಾತುಗಳನ್ನು ಹೇಳಿದರು. ಸರ್ಕಾರದವರು ಈ ಕೈಗಾರಿಕೆ ವಿಚಾರದಲ್ಲಿ ಸದಾ ಎಚ್ಚರಿಕೆಯಿಂದ ನಡೆಯುತ್ತಿದ್ದಾರೆ. ಸೆಂಟ್ರಲ್ ಸಿಲ್ಕ್ ಬೋರ್ಡಿನಲ್ಲಿ ಅಥವಾ ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ಆಗಾಗ್ಗೆ ಇದಕ್ಕೆ ಸಂಬಂಧಪಟ್ಟಹಾಗೆ ಏನೇನು ನಡೆಯುತ್ತಿದೆಯೆಂದು ನೋಡಿ ಯಾವ ಕಾನೂನು ಮತ್ತು ಅನುಕೂಲ ನಮ್ಮ ಸಂಸ್ಥಾನಕ್ಕೆ ಆಗಬೇಕಾಗಿದೆ ಎಂಬ ವಿಚಾರದಲ್ಲಿ ಸಂಸ್ಥಾನದ ಪರವಾಗಿ ನೋಡಿಕೊಳ್ಳುತ್ತಿದ್ದೇನೆ ಎಂಬುದನ್ನು ಈ ಸಮಯದಲ್ಲಿ ಹೇಳುವುದು ಅನಾವಶ್ಯಕ. ಈಗ ಸೆಂಟ್ರಲ್ ಸಿಲ್ಕ್ ಬೋರ್ಡ್ ಸಂಸ್ಥೆ ಯಾವ ರೀತಿಯಲ್ಲಿ ಸಹಾಯ ಮಾಡುತ್ತಿದೆ ಎಂಬುದನ್ನು ನೋಡಬಹುದು. ಹೋದ ಸಾರಿ ಇದಕ್ಕೆ ಸಂಬಂಧಪಟ್ಟ ಕಾನೂನು ಮಾಡಿರುವುದು ಸಭೆಗೆ ಗೊತ್ತಿದೆ. ಮೊನ್ನೆತಾನೆ ಈ ಸಭೆಯಲ್ಲಿರುವ ಅನೇಕ ಮಾನ್ಯ ಸದಸ್ಯರು ಮತ್ತು ಬೇರೆಯವರನ್ನು ಕರೆಸಿ ಕೇಳಿ ಯಾವರೀತಿ ರೂಲ್ಸ್ ಮಾಡಿದರೆ ಈ ಕೈಗಾರಿಕೆಗೆ ಅನುಕೂಲವಾಗುತ್ತದೆ ಎಂಬ ವಿಚಾರವನ್ನು ಕೂಲಂಕಷವಾಗಿ ಪರೀಕ್ಷೆಮಾಡಿದೆ. ಇದು ಕೋರಿಯವರಿಗೂ ಮತ್ತು ಇತರರಿಗೂ ಪರಿಚಯವಾಗಿದೆ.

ರೆಗ್ಯುಲೇಟೆಡ್ ಮಾರ್ಕೆಟ್ ಇರಬೇಕೆಂಬ ವಾದ ಅನೇಕ ಮಿತ್ರರಿಂದ ಇಡಲ್ಪಟ್ಟಿದೆ. ಅದರಲ್ಲೂ ಶ್ರೀ ಪಾಪಣ್ಣನವರು ಈ ವಿಚಾರದಲ್ಲಿ ಹೆಚ್ಚು ನಿಗಾ ವಹಿಸಿ ರೆಗ್ಯುಲೇಟೆಡ್ ಮಾರ್ಕೆಟ್ ಇಲ್ಲದಿದ್ದರೆ ನೀವೇನು ಮಾಡಿದರೂ ಪ್ರಯೋಜನವಾಗುವುದಿಲ್ಲ, ರೆಗ್ಯುಲೇಟೆಡ್ ಮಾರ್ಕೆಟ್ ಅತ್ಯಾವಶ್ಯಕ, ಈಗ ದಳ್ಳಾಳಿಗಳಿಗೆ, ಮತ್ತು ಒಬ್ಬಿಬ್ಬರಿಗೆ ಹೆಚ್ಚು ಲಾಭ ಬರುವುದು ಎಂದು ವಾದ ಮಾಡಿದ್ದಾರೆ. ಸರ್ಕಾರದವರು ಇದನ್ನೆಲ್ಲಾ ಪರಿಶೀಲಿಸಿ ಯಾವರೀತಿ ಸಹಾಯ ನೀಡಬೇಕು ಎಂದು ಯೋಚನೆಮಾಡಿ, ಈ ವಿಚಾರದಲ್ಲಿ ಸಂಪೂರ್ಣ ಸಹಾನುಭೂತಿಯುಳ್ಳವರಾಗಿ ಆದಷ್ಟು ಜಾಗ್ರತೆ ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪನೆ ಬೇಕೆಂದು ಒಂದು ನೀತಿಯನ್ನನುಸರಿಸಿ ಈ ವಿಚಾರದಲ್ಲಿ ರೂಲ್ಸನ್ನು ಪಬ್ಲಿಷ್ ಮಾಡಿದ್ದಾರೆ. ಈ ವಿಚಾರದಲ್ಲಿ ಸೂಕ್ತಕಾರ್ಯಕ್ರಮ ಕೈಕೊಳ್ಳುತ್ತೇವೆ.

ನಮ್ಮ ಮೈಸೂರಿನ ಮಾನ್ಯ ಸ್ನೇಹಿತರು ಮೈಸೂರು ಫಿಲೇಚರ್‌ನಲ್ಲಿ ಎಷ್ಟು ಷೇರು ಇದೆಯೆಂದು ಕೇಳಿದರು. 1,500 ಷೇರುಗಳಿವೆಯೆಂದು ಖಚಿತವಾಗಿ ಹೇಳಬಲ್ಲೆ. ಒಂದು ಷೇರಿಗೆ ಹತ್ತು ರೂಪಾಯಿ, ತಮಗೆ ಕೊಟ್ಟಿರುವ ಬಡ್ಜೆಟ್ಟಿನಲ್ಲಿ ಇದು ಸಮೂಹದಾಗಿರುವುದನ್ನು ನೋಡಬಹುದು.

ಈಗ ಮೈಸೂರು ಫಿಲೇಚರ್‌ಗೆ ಸಂಬಂಧಿಸಿದಹಾಗೆ ಏಳು ಭಾಗಗಳಲ್ಲಿ ಇದರ ಕಾರ್ಖಾನೆಗಳಿವೆ. ಈ ಏಳು ಪ್ರದೇಶಗಳು ಮೈಸೂರು, ಟಿ.-ನರಸೀಪುರ, ಚಾಮರಾಜನಗರ, ಕುದೇರು, ನಂಜೇಪುರಾನಹಳ್ಳಿ, ಮಾಂಬಳ್ಳಿ ಮತ್ತು ಶಿಡ್ಲಘಟ್ಟ. ಇವುಗಳ capacity ರಿಂದ 840 ಬೇಸಿನ್‌ಗಳಷ್ಟಿದ್ದು ಈ ಪೈಕಿ 450 ಬೇಸಿನ್‌ಗಳಷ್ಟು ಕೆಲಸಮಾಡದೆ, ಮೈಸೂರು, ಟಿ.-ನರಸೀಪುರ ಮತ್ತು ಚಾಮರಾಜನಗರ—ಈ ಮೂರುಸ್ಥಳಗಳಲ್ಲಿ ಮಾತ್ರ ಕೆಲಸ ನಡೆಯುತ್ತಿದೆ.

Mr. SPEAKER.—Sri Madappa has heard your speech in the conference. He was present there.

ಶ್ರೀ ಎಚ್. ಸಿದ್ದವೀರಪ್ಪ.—ಒಟ್ಟಿನಲ್ಲಿ ಈ ವಿಚಾರವಾಗಿ ಅವರು ಹೇಳಿರುವುದಕ್ಕೂ ಸರ್ಕಾರದವರ ಅಭಿಪ್ರಾಯಕ್ಕೂ ಯಾವರೀತಿಯ ಭಿನ್ನಾಭಿಪ್ರಾಯವೂ ಇಲ್ಲ.

ಸಾಲದ ವಿಚಾರವಾಗಿ ಒಂದು ಮಾತುಹೇಳುತ್ತೇನೆ ಸರ್ಕಾರದವರು ಇವರಿಗೆ ಸಾಲ ಕೊಡದೇ ಇದ್ದಿದ್ದರೆ ಇವರು ಈ ಕೆಲಸ ಮಾಡುತ್ತಿರಲಿಲ್ಲ. ಇದಕ್ಕಾಗಿ ಇವರೆಲ್ಲರೂ ಸರ್ಕಾರದವರನ್ನು ವಂದಿಸಬೇಕಾಗಿದೆ. ಈ ಸಾಲಕೊಟ್ಟಿರುವುದು ಷೇರ್ ಹೋಲ್ಡರುಗಳ ಅನುಕೂಲಕ್ಕಾಗಿ ಅಲ್ಲ. ಈ ಕೈಗಾರಿಕೆ ಅಭಿವೃದ್ಧಿಗೊಳ್ಳಲಿ ಎಂಬ ಉದ್ದೇಶದಿಂದ. ಈ ದಿನ ಸಾಲ ಕೊಡುವುದನ್ನು ನಿಲ್ಲಿಸಿದರೆ ಅವರೆಲ್ಲರೂ ಮೂಗು ಬಾಯಿ ಹಿಡಿದು ಕುಳಿತುಕೊಳ್ಳಬೇಕಾಗುತ್ತದೆ. ಈ ಕೈಗಾರಿಕೆಯಲ್ಲಿ ನಿರತರಾಗಿರುವವರಿಗೆ ಜೀವನಕ್ಕೆ ಒಂದು ದಾರಿಯಾಗಲಿ ಎಂಬ ಉದ್ದೇಶದಿಂದ ಸಾಲವನ್ನು ಕೊಡುವುದನ್ನು ನಿಲ್ಲಿಸಿಲ್ಲ. ಇದನ್ನು ನಾವು human point of view ನಿಂದ ನೋಡಬೇಕು. ಈ ದಿನ ರೇಷ್ಮೆಗೆ ಡಿಮ್ಯಾಂಡ್ ಇಲ್ಲ, ಮಾರ್ಕೆಟ್ ಇಲ್ಲ, ಇರತಕ್ಕ ಮಾರ್ಕೆಟ್ಟಿನಲ್ಲಿ cost of production ಕಡಮೆ ಮಾಡಿ ಯಾವ ರೀತಿ ಮಾಡಬೇಕೆಂದು ಆಲೋಚಿಸುತ್ತಿದೆ. This is an article of luxury. ಈಗ ಕೃತಕ ರೇಷ್ಮೆಯ competition ಜಾಸ್ತಿಯಾಗಿ ಒಳ್ಳೆಯ ರೇಷ್ಮೆಗೆ ತೊಂದರೆಯುಂಟಾಗಿದೆ. ಈ ವಿಚಾರದಲ್ಲಿ ಯಾವ ರೀತಿ ಮುಂದುವರಿಯಬೇಕೆಂಬ ಬಗ್ಗೆ ನಮ್ಮ ಸರ್ಕಾರದವರೂ ಮತ್ತು ಸೆಂಟ್ರಲ್ ಸಿಲ್ಕ್ ಬೋರ್ಡ್‌ನವರೂ ಯೋಚಿಸುತ್ತಿದ್ದಾರೆ. ಈ ಕೈಗಾರಿಕೆಗೆ ಹೆಚ್ಚಿನ ನಿಗಾ ಕೊಡಬೇಕೆಂಬುದು ಸರ್ಕಾರದ ಇರಾದೆ. ಮಾನ್ಯ ಮಿತ್ರರು ಈ ವಿಚಾರದಲ್ಲಿ ಕಳವಳ ಪಡಬೇಕಾಗಿಲ್ಲ, ಕೈಲಾದಮಟ್ಟಿಗೂ ಸಹಾಯ ಮಾಡುತ್ತೇವೆಂದು ಹೇಳಿದರೆ ಸಾಕಾಗಿದೆ ಎಂದು ನನ್ನ ಅಭಿಪ್ರಾಯ.

Mr. SPEAKER.—His anxiety is that the India Government are importing raw silk to a very large extent. Is it true? Does it not affect our interests? That is what he asks.

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರಿಗೆ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ಅವರು ಈ ವಿಚಾರದಲ್ಲಿ ಮುಂದು ವರಿಯಬೇಕಾದರೆ ನಮ್ಮ ಸಲಹೆಯನ್ನು ಕೇಳುತ್ತಾರೆ. ಈ ರೀತಿ ಆದರೆ ತೊಂದರೆ ಇದೆಯೇ, ನಿಮ್ಮ ಅಭಿಪ್ರಾಯವೇನು ಎಂಬುದಾಗಿ ನಮ್ಮ ಸಲಹೆ ಕೇಳುತ್ತಿದ್ದಾರೆ. ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರು responsive ಆಗಿದ್ದಾರೆಂದು ಹೇಳಿದರೆ ಸಾಕಾಗಿದೆ.

Mr. SPEAKER.—The House will now rise for the day and meet tomorrow at 12 NOON.

---

*The House adjourned for the day at Fifty-five Minutes past Five of the Clock to meet again at Twelve of the Clock on Thursday, 30th July 1953.*

---